ಪ್ರಕಟನೆ.

ಮೈಸೂರು ಡಿಸ್ಟ್ರಿಕ್ಟು ಗುಂಡ್ಲು ಪೇಟೆ ತಾಲ್ಲೂಕುನಲ್ಲಿರುವ ಹೆಗ್ಗವಾಡಿ ಬ್ಲಾಕ Iನೆ ಜಂಗಲಿಯನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ ಸನ್ 1909ನೆ ಇಸವಿ ಮೇ ತಾರೀಖು 20ನೆ ಮೈಸೂರು ಗೆಜೆಟ್ಟಿನ 2ನೆ ಭಾಗದ 395, 396ನೆ ಪೇಜಿನಲ್ಲಿ ವಿಶದವಾಗಿ ವಿವರಿಸಲ್ಪಟ್ಟಿರುತ್ತೆ.

ಮೈಸೂರು ಡಿಸ್ಟ್ರಿಕ್ಟು ಗುಂಡ್ಲು ಪೇಟೆ ಮತ್ತು ಚಾಮರಾಜನಗರ ತಾಲ್ಲೂಕುನಲ್ಲಿರುವ ಹೆಗ್ಗವಾಡಿ ಬ್ಲಾಕ IIನೆ ಜಂಗಲಿಯನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ ಸನ್ 1909ನೆ ಇಸವಿ ಮೇ ತಾರೀಖು 20ನೆ ಮೈಸೂರು ಗೆಜೆಟ್ 2ನೆ ಭಾಗದ 396, 397ನೆ ಪೇಜಿನಲ್ಲಿ ವಿಶದವಾಗಿ ವಿವರಿಸಲ್ಪಟ್ಟಿರುತ್ತೆ.

ಎಂ. ಶಾಮರಾವ್, ಫಾರೆಸ್ಟು ಸೆಟ್ಲ್‌ಮೆಂಟ್ ಆಫಿಸರ್ ಇನ್ ಮೈಸೂರು.

ಬೆಂಗಳೂರು ಡಿಸ್ಟ್ರಿಕ್ಟು.

ನೋಟಿಫಿಕೇಷನ್.

ತಾರೀಖು 30ನೆ ಏಪ್ರಲ್ 1909.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ಡಿಸ್ಟ್ರಿಕ್ಟು ದೊಡ್ಡಬಳ್ಳಾಪುರ ತಾಲ್ಲೂಕು ರಾಮದೇವನಹಳ್ಳಿ ಗ್ರಾಮದಲ್ಲಿರುವ ಹಜಾಂ ರಾಮನೆಂಬುವನು ಖುರ್ದನಾಬಿ ಹಿತ್ತಲಿನಲ್ಲಿ ಅಗಿಯುತ್ತಿರುವಾಗ ಒಂದು ಸಂಣ ಮಣ್ಣಿನ ಮಗೆಯಲ್ಲಿ ಈ ಕೆಳಗೆ ವಿವರಿಸುವ ಭಂಗಾರದ ಆಭರಣಗಳು ಸಿಕ್ಕಿರುತ್ತವೆಂದು ಸದರಿ ರಾಮನಿಂದ ತಿಳಿಯಲ್ಪಟ್ಟಿರುತ್ತೆ. ಸದರಿ ಆಭರಣಗಳಿಗೆ ಯಾರಾದರೂ ಹಕ್ಕುದಾರರಾಗಿದ್ದ ಪಕ್ಷದಲ್ಲಿ ಈ ನೋಟಿಫಿಕೇಷನ್ ಗೆಜೆಟ್ಟಿನಲ್ಲಿ ಫಾಯಿಷಾದ ಲಾಗಾಯಿತು ಆರು ತಿಂಗಳೊಳಗೆ ತಮ್ಮ ಹಕ್ಕನ್ನು ದೊಡ್ಡಬಳ್ಳಾಪುರ ಸಬ್ ಡಿವಿಜನ್ ಆಫೀಸರವರ ರೂಬು ರೂಬು ತಾವೇ ಆಗಲೀ ಅಥವಾ ಲಾಯರ್ ಮುಖಾಂತ್ರವೇ ಆಗಲಿ ಹಾಜರಾಗಿ ಸ್ಥಿರಪಡಿಸಿಕೊಳ್ಳತಕ್ಕದ್ದು. ಹಾಗೆ ತಪ್ಪಿದ ಪಕ್ಷದಲ್ಲಿ ಮೈಸೂರು ಸೀಮೆಯ “ಟ್ರೆಜರ್‌ಟ್ರವ್” ರೂಲ್ಸ 5ನೆ ಸೆಕ್ಷನ್ ಅನುಸರಿಸಿ ವಿಲೆ ಮಾಡಲ್ಪಡುತ್ತೆ.

ಭಂಗಾರದ ಆಭರಣಗಳ ವಿವರ.

ಸವರನ್ ಬಣ್ಣ ಭಂಗಾರದ ಬೆಂಡುವಾಲೆ ಜೊತೆ 1ಕ್ಕೆ ತೂಕ 1 ವರಹ 3 ಹಣ.
ವರಹಬಂಣ ಭಂಗಾರದ ತಾಳಿಗಳು 7ಕ್ಕೆ ತೂಕ 1¾ ವರಹ.
ಕಣಬಂಣ ಭಂಗಾರದ ಗಟ್ಟಿ 1ಕ್ಕೆ ತೂಕ 1 ವರಹ 11 ತೂಕ.

ಬಿ. ಜೆ. ಕೊಮಾರಸ್ವಾಮಿ ನಾಯಿಕ್, ಡೆಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ಇಸಿಹಾರ್.

ತಾರೀಖು 22ನೆ ಏಪ್ರಲ್ 1909ನೆ ಇಸವಿ.

ಸನ್ 1909ನೆ ಇಸವಿ ಜುಲೈ ಮಾಹೆ ತಾರೀಖು 1ರ ಲಾಗಾಯಿತು 1910ನೆ ಇಸವಿ ಜೂನ್ ಮಾಹೆ ತಾರೀಖು 30ರ ವರಿಗೆ ಈ ಕೆಳಗೆ ಎ. ಷೆಡ್ಯೂಲಿನಲ್ಲಿ ನಮೂದಿಸುವ ಮೈಸೂರು ಸಿಟಿಗೆ ಸೇರಿದ ತಮಾಂ ಟೋಲು ಗೇಟುಗಳ ಮುಖಾಂತರ ಸಿಟಿ ವಳಕ್ಕೆ ಬರುವ ಗಾಡಿಗಳು, ಜಾನುವಾರುಗಳು ವಗೈರೆಗಳ ಮೇಲೆ, ಬಿ. ಷೆಡ್ಯೂಲಿನಲ್ಲಿ ನಮೂದಾಗುವ ದರದಂತೆ ಸಿಟಿ ಮ್ಯುನಿಸಿಪಲ್ ರೆಗ್ಯುಲೇಷನ್ 78 ಮತ್ತು 79ನೆ ಸೆಕ್ಷನ್‌ಗಳಲ್ಲಿ ನಮೂದಿಸುವ ಷರತ್ತುಗಳಿಗೆ ಒಳಪಡಿಸಿ ಪ್ರತಿ ಒಂದು ಟೋಲು ಗೇಟಿನಲ್ಲಿಯಾಗಲಿ ಅಥವಾ ದರೋಬಸ್ತು ಗೇಟುಗಳಲ್ಲಿಯಾಗಲಿ ಟೋಲು ವಸೂಲ್ಮಾಡುವ ಬಾಬನ್ನು 1909ನೆ ಇಸವಿ ಜೂನ್ ತಾರೀಖು 11ನೆ ಮಧ್ಯಾಹ್ನ 1 ಘಂಟೆ ಲಾಗಾಯಿತು ರಂಗಾಚಾರ್ಲು ಯವರ ಮೆಮೋರಿಯಲ್ ಹಾಲಿನಲ್ಲಿ ಪ್ರೆಸಿಡೆಂಟರವರಿಂದ ಯಾ ಅವರಿಂದ ಸ್ಪೆಷಲ್ಲಾಗಿ ನೇಮಿಸಲ್ಪಟ್ಟ ಇತರ ಆಫೀಸರವರಿಂದ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟರು ಬಿ. ಷೆಡ್ಯೂಲಿನಲ್ಲಿ ನಮೂದಾಗುವ ರೇಟಿನಂತೆಯೇ ಗೇಟುಗಳ ಮುಖಾಂತರ ಸಿಟಿ ವಳಕ್ಕೆ ಬರುವ ಗಾಡಿ ವಗೈರೆಗಳ ಮೇಲೆ ಟೋಲು ವಸೂಲ್ಮಾಡಬೇಕು. ಹೆಚ್ಚು ರೇಟನ್ನು ವಸೂಲ್ಮಾಡಕೂಡದು. ಶಿವಾಯಿ ಪ್ರೆಸಿಡೆಂಟರವರಿಂದ ವಿಧಾಯಕಮಾಡಲ್ಪಡುವ ಫಾರಂನಲ್ಲಿ ಕ್ರಮವಾಗಿ ಸಾಲ್ಮಾಹೆ ತಾರೀಖು ನಿಸಿ ಟೋಲು ಪಾವತಿ ಮಾಡತಕ್ಕ ಆಸಾಮಿಗಳಿಗೆ ರಶೀದಿ ಕೊಡಬೇಕು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲೀ ಅಥವಾ ಮತ್ಯಾವ ದರವನ್ನೇ ಆಗಲಿ ಮಂಜೂರು ಮಾಡುವ ಅಧಿಕಾರವು ಪ್ರೆಸಿಡೆಂಟರವರಲ್ಲಿ ಇರುತ್ತದೆ.

4. ಪ್ರತಿ ತಿಂಗಳು 10ನೆ ತಾರೀಖು ವಳಗಾಗಿ ಹಿಂದಣ ಮಾಹೆಯ ಖಿಸ್ತು ಮೊಬಲಗನ್ನು ಪಾವತಿ ಮಾಡಬೇಕು. ಹರಾಜು ಖೈದಾದ ಕೂಡ್ಲೆ ಬಾಬನ್ನು ಪಡೆಯತಕ್ಕ ಕಂಟ್ರಾಕ್ಟರು ಎರಡು ಮಾಹೆಗಳ ಖಿಸ್ತಿಗೆ ಸಮವಾದ ಮೊಬಲಗನ್ನು ಡಿಪಾಜಿಟ್ ಬಗ್ಗೆ ಹಾಜರ್ಮಾಡಬೇಕು. ಷರತ್ತುಗಳ ಪ್ರಕಾರ ಕಂಟ್ರಾಕ್ಟು ನಡೆದರೆ ಡಿಪಾಜಿಟ್ಟಿನಲ್ಲಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಖಿಸ್ತು ಬಗ್ಗೆ ಜಮೆಗೆ ತೆಗೆದುಕೊಳ್ಳುತ್ತೆ.

5. ಹರಾಜು ಖೈದಾದ ಕೂಡ್ಲೆ ಡಿಪಾಜಿಟ್ ಬಗ್ಗೆ ಮೊಬಲಗನ್ನು ಹಾಜರ್ಮಾಡದೆ ಇದ್ದರೆ ಖರ್ಚಿಗೂ ಮತ್ತು ಲುಕ್ಸಾನಿಗೂ ಅವಲ್ ದರಖಾಸ್ತುದಾರನನ್ನು ಗುರಿಪಡಿಸಿ ಪುನಹಾ ಹರಾಜು ಮಾಡಿಸುತ್ತೆ. ಖಿಸ್ತು ಮೊಬಲಗು ವಾಯಿದೆವಳಗೆ ಹಾಜರ್ಮಾಡಲು ತಪ್ಪಿದರೆ ಡಿಪಾಜಿಟ್ ಮೊಬಲಗನ್ನು ದಂಡವಾಗಿ ತೆಗೆದುಕೊಂಡು ಬಾಬನ್ನು ದುಸರಾ ಹರಾಜು ಮಾಡಿಸಿ ಅದರಲ್ಲಿ ನಷ್ಟವೇನಾದರೂ ಆದಲ್ಲಿ ಆ ನಷ್ಟಕ್ಕೆ ಅವಲ್ ದರಖಾಸ್ತುದಾರನನ್ನು ಗುರಿಪಡಿಸುತ್ತೆ. ಎರಡನೆ ಹರಾಜಿನಲ್ಲಿ ನಫೆಬಂದಲ್ಲಿ ಮೊದಲು ದರಖಾಸ್ತುದಾರನಿಗೆ ಸದರಿ ನಫೆಗೆ ಹಕ್ಕು ಇರುವದಿಲ್ಲ.

6. ಪ್ರತಿ ಒಬ್ಬ ಕಂಟ್ರಾಕ್ಟರು ರೋಜೇನಾ ಟೋಲುಗೇಟುಗಳ ಮುಖಾಂತರ ಪ್ರವೇಶಮಾಡುವ ತರಹಾವಾರಿ ಗಾಡಿ ಯಾ ಜಾನುವಾರುಗಳು ಇವುಗಳ ಮೇಲೆ ವಸೂಲಾದ ಟೋಲುಯಾನೆ ಸುಂಕ ಇವುಗಳ ತಪಸೀಲು ತೋರಿಸುವ ಲೆಖ್ಖವನ್ನು ಪ್ರೆಸಿಡೆಂಟರವರು ವಿಧಾಯಕ ಮಾಡುವ ನಮೂನೆಯಲ್ಲಿಟ್ಟು ಅಂಥಾ ಲೆಖ್ಖವನ್ನು ಕಂಟ್ರಾಕ್ಟರು ಪ್ರತಿ ಮಾಹೆಯಲ್ಲಿಯೂ ಪ್ರೆಸಿಡೆಂಟರವರ ಇನ್ಸ್‌ಪೆಕ್ಷನ್ ಬಗ್ಗೆ ಹಾಜರ್ಮಾಡಬೇಕು ಶಿವಾಯಿ ಸಾಯರು ಅಥವಾ ಮ್ಯುನಿಸಿಪಲ್ ಉದ್ಯೋಗಸ್ಥರು ಅಪೇಕ್ಷಿಸಿದಾಗ ಅಂಥಾ ಲೆಖ್ಖಗಳನ್ನು ಅವರ ಇನ್ಸ್‌ಪೆಕ್ಷನ್ ಬಗ್ಗೆ ಹಾಜರ್ಮಾಡುವದಕ್ಕೂ ಬದ್ಧನಾಗಿರತಕ್ಕದ್ದು.

7. ಪ್ರತಿ ಒಬ್ಬ ಕಂಟ್ರಾಕ್ಟರು ಟೋಲುಗೇಟುಗಳ ಮುಖಾಂತರ ಬರತಕ್ಕ ಗಾಡಿ ಯಾ ಜಾನುವಾರುಗಳ ತಪ್ಸೀಲುಗಳ ಲೆಖ್ಖವನ್ನು 6ನೆ ಕಲಂನಲ್ಲಿ ನಮೂದಿಸಿರುವಂತೆ ಇಡತಕ್ಕ ಬಗ್ಗೆ ಆಯಾಯ ಕಂಟ್ರಾಕ್ಟುದಾರನ ಸ್ವಂತ ಖರ್ಚಿನಿಂದ ಪ್ರತಿ ಒಂದು ಟೋಲು ಗೇಟಿನಲ್ಲಿಯೂ ಒಬ್ಬೊಬ್ಬ ಮುತ್ಸದ್ದಿಯನ್ನು ಇಡುವದಕ್ಕೆ ಬದ್ಧನಾಗಿರತಕ್ಕದ್ದು.